



ಆಗಿನ ಶ್ರಮ, ಈಗಿನ ಫಲ... 2017ರಲ್ಲಿ ಬೆಂಗಳೂರಿನಲ್ಲಿ ಅಭ್ಯಾಸ ಮಾಡುವಾಗ ಲಕ್ಷ್ಯ ಸೇನ್

ಕಲಿಕಾ ಹಂತದ ಆರಂಭದ ದಿನಗಳಲ್ಲಿ ಲಕ್ಷ್ಯ ಸೇನ್ ಎರಡಂಕಿಯ ಅಂಕ ಗಳಿಸಲು ಪದೇ ಪದೇ ವಿಫಲರಾಗಿ ಸೋಲು ಕಾಣುತ್ತಿದ್ದರು. ನಿರಾಸೆ ತಾಳಲಾಗದೇ ಅಳುತ್ತಿದ್ದರು.

ನಂತರದ ಆರು ವರ್ಷಗಳಲ್ಲಿ ಅವರ ಆಟದ ಶೈಲಿ ಸಂಪೂರ್ಣ ಬದಲಾಯಿತು. ಸ್ಪರ್ಧಾತ್ಮಕ ಜಗತ್ತಿಗೆ ಬೇಕಾದ ಕೌಶಲ, ಎದುರಾಳಿಯ ತಂತ್ರಕ್ಕೆ ಪ್ರತಿತಂತ್ರ ಹೂಡುವ ಚಾಣಾಕ್ಷತನ ಕಲಿತುಕೊಂಡರು. ಇದರ ಪರಿಣಾಮದಿಂದಾಗಿ 13, 17 ಮತ್ತು 19 ವರ್ಷದ ಒಳಗಿನವರ ರಾಷ್ಟ್ರೀಯ ಟೂರ್ನಿಗಳಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿದರು. 19 ವರ್ಷದ ಒಳಗಿನವರ ವಿಭಾಗದಲ್ಲಿ ರಾಷ್ಟ್ರೀಯ ಪ್ರಶಸ್ತಿ ಗೆದ್ದಾಗ ಅವರಿಗೆ ಕೇವಲ 15 ವರ್ಷ!

ಲಕ್ಷ್ಯ ಸೇನ್ ಬೆಳೆದ ಅಲ್ಮೋರಾ ಹಾಗೂ ಸುತ್ತಮುತ್ತಲಿನ ಪ್ರದೇಶದ ವಾತಾವರಣ ಅವರ ಕ್ರೀಡಾಬದುಕು ವೇಗವಾಗಿ ಪ್ರಗತಿ ಕಾಣಲು ನೆರವಾಯಿತು. ಅಲ್ಮೋರಾ ನಗರ, ಸಮುದ್ರ ಮಟ್ಟದಿಂದ 5,000 ಅಡಿಗಳಷ್ಟು ಎತ್ತರದಲ್ಲಿದ್ದು, ಅವರಿಗೆ ಫಿಟ್‌ನೆಸ್ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಸಹಕಾರಿಯಾಯಿತು. ಹೆಚ್ಚು ಹೊತ್ತು ಅಂಕಣದಲ್ಲಿ ನಿಂತುಕೊಂಡು ಆಡುವ ಶಕ್ತಿ, ದೈಹಿಕ ಕ್ಷಮತೆ ಗಟ್ಟಿಗೊಂಡಿತು. 17 ವರ್ಷದವರಿದ್ದಾಗಲೇ ಹೊಂದಿದ್ದ 5.10 ಅಡಿ ಎತ್ತರ ಕೂಡ ಲಕ್ಷ್ಯ ಸೇನ್‌ಗೆ ವರದಾನವಾಯಿತು. ಇದೆಲ್ಲಕ್ಕಿಂತ ಹೆಚ್ಚಾಗಿ 2010ರಿಂದ ಬೆಂಗಳೂರಿನಲ್ಲಿ ‘ಪ್ರಕಾಶ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿ’ಯಲ್ಲಿ ತರಬೇತಿ ಪಡೆಯುವ ಅವಕಾಶ ಲಭಿಸಿತು. ಜೊತೆಗೆ ಭಾರತ ತಂಡದ ಮಾಜಿ ಕೋಚ್ ಯು. ವಿಮಲ್ ಕುಮಾರ್ ಮಾರ್ಗದರ್ಶನವೂ ಸಿಕ್ಕಿತು.

ರಾಷ್ಟ್ರೀಯ ಮಟ್ಟದ ಟೂರ್ನಿಗಳಲ್ಲಿ ಒಂದಾದ ಮೇಲೊಂದು ಪ್ರಶಸ್ತಿಗಳನ್ನು ಗೆಲ್ಲುತ್ತಿದ್ದ ಲಕ್ಷ್ಯ ಸೇನ್‌ಗೆ 2016 ಸುವರ್ಣ ವರ್ಷ. ಆ ವರ್ಷ (ಬ್ಯಾಂಕಾಕ್) ಹಾಗೂ 2018ರ (ಜಕಾರ್ತ) ಏಷ್ಯನ್ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಕಂಚು ಹಾಗೂ ಚಿನ್ನದ ಪದಕ ಜಯಿಸಿದ್ದರು. 2018ರಲ್ಲಿ ಬ್ಯೂನಸ್ ಐರಿಸ್‌ನಲ್ಲಿ ಯೂಥ್ ಒಲಿಂಪಿಕ್ಸ್ ಕ್ರೀಡಾಕೂಟದ ಮಿಶ್ರ ತಂಡ ವಿಭಾಗದಲ್ಲಿ ಚಿನ್ನದ ಒಡೆಯರಾದರು. ಮರು ವರ್ಷವೇ ಏಷ್ಯನ್ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಅಗ್ರ ಶ್ರೇಯಾಂಕದಲ್ಲಿದ್ದ ವಿಶ್ವದ ನಂಬರ್ ಒನ್ ಆಟಗಾರನನ್ನು ಮಣಿಸಿದ್ದರು.

2018ರಲ್ಲಿ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನ ಬಾಲಕರ ಸಿಂಗಲ್ಸ್‌ನಲ್ಲಿ ಬೆಳ್ಳಿ, ಅದೇ ವರ್ಷ ಯೂಥ್ ಒಲಿಂಪಿಕ್ಸ್‌ನ ಸಿಂಗಲ್ಸ್‌ನಲ್ಲಿ ಬೆಳ್ಳಿ, 2020ರ ಏಷ್ಯನ್ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಮತ್ತು ಹೋದ ವರ್ಷ ವಿಶ್ವ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್‌ನಲ್ಲಿ ಕಂಚಿನ ಪದಕಗಳನ್ನು ಜಯಿಸಿದರು. ಜೂನಿಯರ್ ಹಂತದಲ್ಲಿ ಮಾಡಿದ ಸಾಧನೆಯಿಂದಾಗಿ 2018ರಲ್ಲಿ ವಿಶ್ವಮಟ್ಟದಲ್ಲಿ ಅಗ್ರ ರ್‍ಯಾಂಕ್ ಸಂಪಾದಿಸಿದರು. ಪ್ರಕಾಶ ಪಡುಕೋಣೆ ಹಾಗೂ ಪುಲ್ಲೇಲ ಗೋಪಿಚಂದ್ ಬಳಿಕ ಈ ಸಾಧನೆ ಮಾಡಿದ ಭಾರತದ ಮೂರನೇ ಆಟಗಾರ ಎನಿಸಿದರು.

ಲಕ್ಷ್ಯ ಸೇನ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಒಂದು, ಯೂಥ್ ಒಲಿಂಪಿಕ್ಸ್‌ನಲ್ಲಿ ಒಂದು, ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಒಂದು, ಏಷ್ಯನ್ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಎರಡು, ಬಿಡಬ್ಲ್ಯುಎಫ್ ವಿಶ್ವ ಟೂರ್‌ನಲ್ಲಿ ಮೂರು, ಬಿಡಬ್ಲ್ಯುಎಫ್ ಅಂತರರಾಷ್ಟ್ರೀಯ ಚಾಲೆಂಜ್ ಸರಣಿಯಲ್ಲಿ 7 ಬಾರಿ ಚಾಂಪಿಯನ್ ಆಗಿದ್ದಾರೆ. ಬಿಡಬ್ಲ್ಯುಎಫ್ ಅಂತರರಾಷ್ಟ್ರೀಯ ಚಾಲೆಂಜ್ ಸರಣಿಯಲ್ಲಿ ಮೂರು ಬಾರಿ ರನ್ನರ್ ಅಪ್ ಸ್ಥಾನ ಗಳಿಸಿದ್ದಾರೆ. ಅಂತರರಾಷ್ಟ್ರೀಯ ಜೂನಿಯರ್ ಟೂರ್ನಿಯಲ್ಲಿ ಎರಡು ಚಾಂಪಿಯನ್ ಮತ್ತು ಒಂದು ಬಾರಿ ರನ್ನರ್ ಅಪ್ ಆಗಿದ್ದಾರೆ. ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಆಡಿರುವ ಒಟ್ಟು 235 ಪಂದ್ಯಗಳಲ್ಲಿ 176ರಲ್ಲಿ ಗೆಲುವು ಸಾಧಿಸಿದ್ದಾರೆ. ಇದರಿಂದ ಲಭಿಸಿದ ಪ್ರಶಸ್ತಿಗಳೇ ಅವರ ಸಾಧನೆಗೆ, ಆಟದ ಕೌಶಲಕ್ಕೆ ಸಾಕ್ಷಿಯಾಗಿವೆ.

ಇಂಡಿಯಾ ಓಪನ್ ಟೂರ್ನಿಯಲ್ಲಿ ಚೀನಾ, ಸಿಂಗಪುರದ ಪ್ರಬಲ ಆಟಗಾರರನ್ನು ಮಣಿಸಿ ಪ್ರಶಸ್ತಿ ಜಯಿಸಿದ್ದಾರೆ. ಇದು ಹೊಸ ಆಟಗಾರರಲ್ಲಿ ಆತ್ಮವಿಶ್ವಾಸ ಮೂಡಿಸಿದೆ.

ಭಾರತದ ಬ್ಯಾಡ್ಮಿಂಟನ್ ಕ್ರೀಡಾ ಸಾಧಕರಾದ ಸೈಯದ್ ಮೋದಿ, ದೀಪಾಂಕರ ಭಟ್ಟಾಚಾರ್ಯ, ಮಧುಮಿತಾ ಬಿಸ್ಟ್, ಪಿ.ವಿ.ವಿ. ಲಕ್ಷ್ಮಿ, ವಿಮಲ್ ಕುಮಾರ್, ಪ್ರಕಾಶ ಪಡುಕೋಣೆ, ಅಪರ್ಣಾ ಪೊಪಟ್, ಪುಲ್ಲೇಲ ಗೋಪಿಚಂದ್, ಅನೂಪ್ ಶ್ರೀಧರ, ದಿನೇಶ್ ಖನ್ನಾ, ಸೈನಾ ನೆಹ್ವಾಲ್, ಪಿ.ವಿ. ಸಿಂಧು, ಕೆ. ಶ್ರೀಕಾಂತ, ವಿ. ದಿಜು, ಜ್ವಾಲಾ ಗುಟ್ಟಾ, ಅಶ್ವಿನಿ ಪೊನ್ನಪ್ಪ ಅವರ ಸಾಲಿನಲ್ಲಿ ನಿಲ್ಲಲು ಲಕ್ಷ್ಯ ಸೇನ್ ಎನ್ನುವ ನಕ್ಷತ್ರ ನಿರಂತರವಾಗಿ ಹೊಳೆಯುತ್ತಿರಬೇಕು. 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಅವರಿಗೆ ‘ಚಿನ್ನದ ಹೂ’ ಅರಳಿಸಲು ಈಗಿನ ಸಾಧನೆ ಪ್ರೇರಣೆಯಾಗಬೇಕು.

ಪ್ರತಿಕ್ರಿಯಿಸಿ: feedback@sudha.co.in